ಕರ್ನಾಟಕ ವಿಧಾನ ಸಭೆ

582 ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಮುಖ್ಯ ಮಂತ್ರಿಗಳು

ಅ) ನಿವೃತ್ತ ಸರ್ಕಾರಿ ನೌಕರರಿಗೆ 5ನೇ ವೇತನ ಆಯೋಗವು ಶಿಫಾರಸ್ಸು ಮಾಡಿದ ಸೌಲಭ್ಯಗಳು ಯಾವುವು?

5ನೇ ವೇತನ ಆಯೋಗವು ನಿವೃತ್ತಿ ವೇತನದಾರರಿಗೆ ಈ ಕೆಳಗಿನಂತೆ ಶಿಫಾರಸ್ಸುಗಳನ್ನು ಮಾಡಿದೆ.

(1) ಕನಿಷ್ಟ ನಿವೃತ್ತಿ ವೇತನ, ಕುಟುಂಬ ನಿವೃತ್ತಿ ವೇತನವನ್ನು ರೂ.2250ಕ್ಕೆ ಹೆಚ್ಚಿಸುವುದು.

(2) ಹಿಂದೆ ನಿವೃತ್ತಿಯಾದವರ ನಿವೃತ್ತಿ ವೇತನವನ್ನು ಅವರು ನಿವೃತ್ತಿ ದಿನಾಂಕದಂದು ಧಾರಣ ಮಾಡಿದ ಹುದ್ದೆಗೆ ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಮೂಲ ವೇತನದ ಶೇಕಡ 50ರಷ್ಟು ನಿವೃತ್ತಿ ವೇತನ ನೀಡುವುದು ಹಾಗೂ ಕುಟುಂಬ ವೇತನವು ಅನ್ವಯವಾಗುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಹಂತದ ಶೇಕಡ 30ರಷ್ಟು ನೀಡುವುದು.

(3) ನಿವೃತ್ತಿದಾರರ ಕುಂದು ಕೊರತೆಗಳನ್ನು ಸಕಾಲದಲ್ಲಿ ಪರಿಶೀಲಿಸಿ ಪರಿಹಾರ ನೀಡಲು ನಿವೃತ್ತಿ ವೇತನದಾರರ ನಿರ್ದೇಶನಾಲಯ ಸ್ಥಾಪಿಸುವುದು.

(4) ರಾಜ್ಯ ನಿವೃತ್ತ ನೌಕರರಿಗೂ ಮತ್ತು ಕುಟುಂಬ ವೇತನದಾರರಿಗೂ ವೈದ್ಯಕೀಯ ಸೌಲಭ್ಯ ಒದಗಿಸುವ ಸಲುವಾಗಿ ಒಂದು ಯೋಜನೆಯನ್ನು ಜಾರಿಗೆ ತರುವುದು.

ಆ) ಆಯೋಗದವರು ಮಾಡಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಜರುಗಿಸಿದೆಯೇ

ಹೌದು.

ಕನಿಷ್ಟ ನಿವೃತ್ತಿ ವೇತನ ಮತ್ತು ಕನಿಷ್ಟ ಕುಟುಂಬ ನಿವೃತ್ತಿ ವೇತನವನ್ನು ರೂ2250ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ. ಇನ್ನುಳಿದ ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ.

ಇ) ಹಾಗಿಲ್ಲದಿದ್ದಲ್ಲಿ ಸಕಾಲದಲ್ಲಿ ಶಿಫಾರಸ್ಸುಗಳ ಜಾರಿ ಕುರಿತಾದ ಕ್ರಮ ಜರುಗಿಸಲು ಸರ್ಕಾರ ಮುಂದಾಗುವುದೇ?

ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ವಿಧಾನ ಸಭೆ

584 ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈಗಾಗಲೇ ನಿವೇಶನ ಹಂಚಿಕೆ ಪ್ರಕ್ರಿಯೆ ಮುಗಿದು ಹಲವಾರು ವರ್ಷಗಳು ಕಳೆದರೂ ಬಡಾವಣೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸದೇ ಇರುವ ಬಡಾವಣೆಗಳಾವುವು; (ವಿವರ ನೀಡುವುದು);